**Scholarly Research Journal for Interdisciplinary Studies**
Online ISSN 2278-8808, SJIF 2025 = 8.486
Peer Reviewed & Refereed Journal, AUG-SEPT 2025, Vol- 13/86

# ಬಂಡಾಯ ಮತ್ತು ದಲಿತ ಸಾಹಿತ್ಯ ಚಳುವಳಿಯಿಂದ ಉಂಟಾದ ಸಾಮಾಜಿಕ ಬದಲಾವಣೆ ಒಂದು ನೋಟ

**ಡಾ. ರಂಗಲಕ್ಷ್ಮಿ ಪಿ. ಎ**

*ಕನ್ನಡ ಸಹ ಪ್ರಾಧ್ಯಾಪಕರು, ಲಾಲ್ ಬಹದ್ದೂರ್ ಶಾಸ್ತ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆರ್. ಟಿ. ನಗರ –ಬೆಂಗಳೂರು– 560032*

**Paper Received On**: 20 AUGUST 2025
**Peer Reviewed On:** 24 SEPTEMBER 2025
**Published On:** 01 OCTOBER 2025

ಆಧುನಿಕ ಕನ್ನಡ ಸಾಹಿತ್ಯಕ್ಕೆ ಸುಮಾರು ಒಂಬತ್ತು ದಶಕಗಳಷ್ಟು ಧೀರ್ಘವಾದ ಇತಿಹಾಸವಿದೆ. ಅದು ಕಾಲದ, ದೇಶದ, ಪರಿಸರದ ಪರಿಸ್ಥಿತಿ ಮತ್ತು ತುರ್ತಿಗೆ ಅನುಗುಣವಾಗಿ ಬದಲಾಗುತ್ತಾ ರೂಪುಗೊಳ್ಳುತ್ತಾ, ಬೆಳೆಯುತ್ತಾ ಬಂದಿದೆ. ಇದು ಧಿಢೀರನೆ ಉಂಟಾದ ಕಾರ್ಯವಲ್ಲ. ಒಂದು ಭಾಷೆಯ ಜೀವಂತಿಕೆಯೂ ಅದರಲ್ಲಿ ಉಂಟಾಗುವ ಬೆಳವಣಿಗೆಗಳಿಗೂ ಸಾಹಿತ್ಯದಲ್ಲಿ ಅವಿನಾಭಾವ ಸಂಬಂಧವಿರುತ್ತದೆ. ಭಾರತೀಯ ಸಮಾಜದಲ್ಲಂತೂ ಶತಶತಮಾನಗಳಿಂದ ಜಾತಿ ಆಧಾರಿತ ಅಸಮಾನತೆ, ಶೋಷಣೆ ಮತ್ತು ಅಸ್ಪೃಶ್ಯತೆ ನೆಲೆಯೂರಿತ್ತು.

ಬರಗೂರು ರಾಮಚಂದ್ರಪ್ಪ ಅವರು ಹೇಳುವಂತೆ ಮನುಷ್ಯ ಮನುಷ್ಯರ ನಡುವೆ ಕಲ್ಲಿನ ಕೋಟೆ ಕಟ್ಟುವ ಅಮಾನವೀಯ ಬದುಕನ್ನು ಹಸನುಗೊಳಿಸುವ ಆಕಾಂಕ್ಷೆ ಬಂಡಾಯ ಸಾಹಿತ್ಯದ ಬೆನ್ನೆಲುಬು. ಈ ಆಕಾಂಕ್ಷೆ ಹೊತ್ತ ವ್ಯವಸ್ಥೆ ವಿರೋಧಿ ಆಶಯಗಳ ಅಭಿವ್ಯಕ್ತಿಯೇ ನಮ್ಮ ಸೃಜನಶೀಲತೆಯ ಮುಖ್ಯ ಕಾಳಜಿಮುಂತಾದ ವಿಷಯಗಳ ಪ್ರಸ್ತಾಪನೆಯು ಈ ಲೇಖನದಲ್ಲಿ ಮೂಡಿ ಬಂದಿದೆ.

ಇಂತಹ ಅನ್ಯಾಯದ ವಿರುದ್ದ ೨೦ನೇ ಶತಮಾನದಲ್ಲಿ ದಲಿತರು ಪ್ರಬಲವಾಗಿ ಎದ್ದು ನಿಂತು ಮಾಡಿದ ಹೋರಾಟವೇ ದಲಿತ–ಬಂಡಾಯ.೧೯೭೦ ರಲ್ಲಿ ದಲಿತ ಚಳುವಳಿ ಕನ್ನಡ ಸಾಹಿತ್ಯದಲ್ಲಿ ಪ್ರಭಾವ ಬೀರಿತು.ಇದು ಕೇವಲ ರಾಜಕೀಯ ಅಥವಾ ಸಾಮಾಜಿಕ

*Copyright © 2025, Scholarly Research Journal for Interdisciplinary Studies*

ಚಳುವಳಿಯಾಗಿರದೆ, ಸಾಹಿತ್ಯದ ಮೂಲಕವೂ ಮಹತ್ತರವಾದ ಬದಲಾವಣೆಯನ್ನು ತಂದಿತು.

ಬಂಡಾಯ-ದಲಿತ ಧ್ವನಿಗೆ ಸಾಹಿತ್ಯವೇ ವೇದಿಕೆಯಾಗಿತ್ತು.ದಲಿತ ಸಾಹಿತ್ಯವಂತೂ ತಮ್ಮ ನೋವು, ಅನುಭವ, ಕಷ್ಟ ಹಾಗೂ ಹೋರಾಟಗಳನ್ನು ನೇರವಾಗಿ, ಯಾವುದೇ ಅಲಂಕಾರವಿಲ್ಲದೆ ಹೇಳುವ ನವೀನ ಪ್ರಕಾರವಾಗಿ ಹೊರಹೊಮ್ಮಿತು.ದಲಿತ-ಬಂಡಾಯದ ಮೂಲಭೂತ ಕಾರಣಗಳಂತೂ ಅರ್ಥಪೂರ್ಣವಾಗಿವೆ. ಅವುಗಳಲ್ಲಿ ಕೆಲವನ್ನು ಹೀಗೆ ನೋಡುವುದಾದರೆ,

- ಅಸ್ಪೃಶ್ಯತೆಯ ವಿರುದ್ಧ ಕಾನೂನು ಕ್ರಮಗಳು ಗಟ್ಟಿಯಾಗಬೇಕು
- ರಾಜಕೀಯ ಆಡಳಿತ ಕ್ಷೇತ್ರಘಳಲ್ಲಿ ದಲಿತರ ಪ್ರತಿನಿಧಿತ್ವ ಹೆಚ್ಚಾಗಬೇಕಿತ್ತು
- ಶೋಷಿತ ವರ್ಗದ ಧ್ವನಿಗೆ ರಾಷ್ಟ್ರ ಮಟ್ಟದಲ್ಲಿ ಬೆಲೆ ಸಿಗಬೇಕಾಗಿತ್ತು.
- ಶಿಕ್ಷಣದ ಮಹತ್ವ ಹೆಚ್ಚಾಗಬೇಕಾಗಿತ್ತು
- ಜಾತಿ ಆಧಾರಿತ ಅಸಮಾನತೆ ವಿರುದ್ಧ ಜಾಗೃತಿ ಮೂಡಬೇಕಾಗಿತ್ತು.

ಹೀಗೆ ಇನ್ನೂ ಹಲವಾರು ಕಾರಣಗಳು ಬಂಡಾಯ-ದಲಿತ ಸಾಹಿತ್ಯದ ಚಳುವಳಿ ಬಲವಾಲು ಕಾರಣವಾಗಿದ್ದವು ಎಂದರೆ ತಪ್ಪಾಗಲಾರದು.ದಲಿತ-ಬಂಡಾಯ ಸಾಹಿತ್ಯವು ನೋವು ಹೋರಾಟ ಮತ್ತು ಸಮಾನತೆಯ ಹಂಬಲವನ್ನು ನೇರವಾಗಿ ವ್ಯಕ್ತ ಪಡಿಸಿತು.

**ದಲಿತ ಸಾಹಿತ್ಯದಿಂದ ಸಮಾಜದಲ್ಲಿ ಜಾತಿ ಅಸಮಾನತೆ ವಿರುದ್ಧ ಜಾಗೃತಿ ಮೂಡಿತು**.

ಹಲವಾರು ಲೇಖಕರು, ಕವಿಗಳು ದಲಿತರ ಬದುಕನ್ನು ಯಾವುದೇ ಮುಚ್ಚು ಮರೆಯಿಲ್ಲದೆ ತಮ್ಮ ಸಾಹಿತ್ಯದಲ್ಲಿ ಬರೆದರು. ಸತ್ಯದ ಮಾತೆಂದರೆ ಈ ದಲಿತ-ಬಂಡಾಯಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆ ಪ್ರೇರಣೆಯಾಗಿತ್ತು.ಅವರ ಚಿಂತನೆ ಬೌದ್ಧ ಧರ್ಮದ ಪ್ರೇರಣೆ ಸಾಮಜಿಕ ಅಸಮಾನತೆಗಾಗಿ ನಡೆದ ಹೋರಾಟ ದಲಿತ-ಬಂಡಾಯಕ್ಕೆ ಆಧಾರವಾಗಿತ್ತು.ದಲಿತರ ಸ್ವಾಭಿಮಾನ ಮತ್ತು ಹಕ್ಕು ಗಳನ್ನು ಕಾಪಾಡಿಕೊಳ್ಳಲು ಈ ಚಳುವಳಿ ಜನ್ಮ ತಾಳಿತು. ಅದೇ ರೀತಿಯಲ್ಲಿ ಶಿಕ್ಷಣ, ಸ್ವಾಭಿಮಾನ, ರಾಜಕೀಯ ಪ್ರತಿನಿಧಿತ್ವ ಇತ್ಯಾದಿ ಕ್ಷೇತ್ರಗಳಲ್ಲಿ ಬದಲಾವಣೆ ಕಂಡುಬಂದವು.

*Copyright © 2025, Scholarly Research Journal for Interdisciplinary Studies*

ಆಧುನಿಕ ಕನ್ನಡ ಸಾಹಿತ್ಯವು ಮಹತ್ವ ಕಾಲಘಟ್ಟಗಳಲ್ಲಿ ಒಂದಾದ ಬಂಡಾಯ-ದಲಿತ ಸಾಹಿತ್ಯ ಚಳುವಳಿಯು ಸದ್ಯದ ಚಳುವಳಿಯೆಂದು ಹೆಸರು ಮಾಡಿದೆ.ನವ್ಯದ ಮುಕ್ತಾಯವನ್ನು ಘೋಷಿಸುತ್ತಾ ಪ್ರಾರಂಭವಾದ ಈ ಸಾಹಿತ್ಯ ಚಳುವಳಿ ನಿಜವಾಗಿ ಚಳುವಳಿಯ ಅರ್ಥದಲ್ಲಿ ಅನ್ವರ್ಥವಾಗಿ ರೂಪುಗೊಂಡಿದ್ದು, ಏಕಕಾಲಕ್ಕೆ ಸಾಹಿತ್ಯ ಮತ್ತು ಸಂಘಟನೆಯ ಸ್ವರೂಪವನ್ನು ತಾಳಿ ಮಹತ್ವದ ನಿರೀಕ್ಷೆಗಳನ್ನು ಹುಟ್ಟುಹಾಕಿದೆ.

ಸಮಾಜ ಮುಖಿಯಾಗಿ ಮನುಷ್ಯ ಸಂಬಂಧವನ್ನು, ಸಮಾಜವನ್ನು ಅದರಲ್ಲಿನ ಡೊಂಕುಗಳನ್ನು ತನ್ಮೂಲಕ ದೇಶವನ್ನು ಸುಧಾರಿಸುವ ಮಹತ್ವದ ಹಂಬಲವನ್ನು ಕನಸನ್ನು ಇಟ್ಟುಕೊಂಡು ರೂಪುಗೊಂಡ ಈ ಚಳುವಳಿ ಆ ನಿಟ್ಟಿನಲ್ಲಿ ಒಂದಷ್ಟನ್ನು ಸಾಧಿಸಿದ್ದೂ ಹೌದು.ಇದುವರೆಗಿನ ಸಾಹಿತ್ಯ ಘಟ್ಟಗಳಲ್ಲಿ ಸಾಹಿತ್ಯ ಸೃಷ್ಟಿ ವೈಯಕ್ತಿಕ ನೆಲೆಯಲ್ಲಿ ಸಮಷ್ಟಿ ಕಡೆಗೆ ಚಲಿಸುವುದನ್ನು ಗಮನಿಸಿದರೆ ಬಂಡಾಯ-ದಲಿತ, ಸಮಷ್ಟಿ ನೆಲೆಯಿಂದ ಸಮುದಾಯದ ಹಿತದೃಷ್ಟಿಯಿಂದ ಚಿಂತನೆಗಳನ್ನು ರೂಪಿಸಲು ನಡೆಸಿದ ಮೊದಲ ಪ್ರಯತ್ನವೆನ್ನಬಹುದು.

ಸ್ವಾತಂತ್ರ್ಯಾನಂತರದ ಕನಸುಗಳ ಭ್ರಮೆಯನ್ನು ಅರ್ಥೈಸುವ ದೊಡ್ಡ ಆಶಯದೊಂದಿಗೆ ನವ್ಯ ಕೂಡ ವೈಯಕ್ತಿಕ ಮಿತಿಯಲ್ಲಿ ಮತ್ತು ತನ್ನದೇ ಕೆಲವು ಭ್ರಮೆಗಳ ನಿರ್ಮಾಣದಲ್ಲಿ ನಿಂತು ಹೋಯಿತು ಎಂದು ವಿಶ್ಲೇಷಿಸಲಾಗಿದೆ.ನವೋದಯ ತನ್ನ ಸಾಧ್ಯತೆಯ ಅವಕಾಶಗಳನ್ನೆಲ್ಲಾ ಮುಗಿಸಿದೆ ಎಂದು ಘೋಷಿಸಿದ ನವ್ಯ ತನ್ನ ಸಾಧ್ಯತೆಗಳ ಎಲ್ಲದರ ಮುಕ್ತಾಯದ ಹಂತಕ್ಕೆ ಬಂದು ನಿಂತಿತ್ತು.ಮುಂದೇನು ಎನ್ನುವುದು ಪರಂಪರೆಯ ಓದುಗರ ಪ್ರಶ್ನೆಯಾಗಿತ್ತು.ಅಷ್ಟು ಹೊತ್ತಿಗೆ ನಿರೀಕ್ಷೆಯ ಪರಿಸರದ ನೆಲೆಗಳು ದೇಶದ ಪರಿಸ್ಥಿತಿ, ನಾಡು-ನುಡಿ, ಜನಜೀವನ ಸಹೃದಯತೆಗಳೆಲ್ಲದರ ಸಂದರ್ಭಗಳೂ ಭಿನ್ನವಾಗಿದ್ದವು.ಸಾಮಾಜಿಕ ವ್ಯವಸ್ಥೆಯ ಅಸಮಾನತೆ ಬಹುದೊಡ್ಡ ಸಮಸ್ಯೆಯಾಗಿತ್ತು.ಜಾತಿ, ವರ್ಗ, ಲಿಂಗ, ತಾರತಮ್ಯಗಳೇ ಈ ದೇಶದ ಬಹುಪಾಲು ಅನರ್ಥಗಳಿಗೆ ಆದಿಯಾಗಿದ್ದವು. ಮಾನವೀಯ ತುಡಿತ ಕಾಳಜಿಗಳ ನೆಲೆಯಿಂದ ದೇಶವನ್ನು ಕಟ್ಟುವ-ಉಳಿಸುವ ಹೊಸತೊಂದು ಕನಸು ರೂಪುಗೊಳ್ಳತೊಡಗಿತ್ತು.ಅದು ನಿಜದ ನೆಲೆಯಲ್ಲಿ ಸ್ವಾತಂತ್ರ್ಯದ, ಸಮಾನತೆಯ ಅರ್ಥವನ್ನು ಗ್ರಹಿಸುವುದಕ್ಕೆ ಸಂಬಂಧಿಸಿದುದಾಗಿತ್ತು.ಇದುವರೆಗಿನ ಸಾಹಿತ್ಯದ ಆಲೋಚನೆಗಳ ಆಚೆಗೆ ಮತ್ತೇನೋ ಬೇಕು ಎಂಬ ತಹತಹಿಕೆಯದಾಗಿತ್ತು.

*Copyright © 2025, Scholarly Research Journal for Interdisciplinary Studies*

ಒಂದು ಸಾಹಿತ್ಯ ಪರಂಪರೆ ತನ್ನ ತನವನ್ನೆಲ್ಲಾ ಸಾಧಿಸಿದ ಮೇಲೆ ಪುನರಾವರ್ತನೆಯ ಹಾದಿ ಹಿಡಿದಾಗಲೇ ಮುಕ್ತಾಯದ ಸತ್ಯವನ್ನು ಪ್ರಕಟಿಸುತ್ತದೆ.ಆದರೆ, ಅದರೊಂದಿಗೆ ಅದು ಹೊಸ ಸಾಧ್ಯತೆಯ ಹೊಳವುಗಳನ್ನು ಮುಂದಿನ ಪರಂಪರೆಗೆ ಬಿಟ್ಟುಕೊಡುವಂತದಾಗಿರುತ್ತದೆ.ಅದು ಆಧುನಿಕ ಕನ್ನಡ ಸಾಹಿತ್ಯವು ಘಟ್ಟಗಳಿಂದ ಘಟ್ಟಗಳಿಗೆ ಚಲಿಸುವ ಹಂತದಲ್ಲಿ ಪೂರಕವೆಂಬಂತೆ ನಡೆದಿರುವುದನ್ನು ನೆನೆಯ ಬಹುದು.ಈ ನಿಟ್ಟಿನಲ್ಲಿ ದಲಿತ ಮತ್ತು ಬಂಡಾಯ ಸಾಹಿತ್ಯಗಳು ತ್ವರಿತಗತಿಯಲ್ಲಿ ತಮ್ಮ ಬರವಣಿಗೆಗಳ ಮೂಲಕ ಸಮಾಜದ ಬದಲಾವಣೆಯನ್ನು ಬಯಸಿದವು.ಬಂಡಾಯ-ದಲಿತ ಎಂಬುದು ಸಾಹಿತ್ಯ ಚಳುವಳಿಗಳ ಮಿತಿಗಳನ್ನಷ್ಟೆ ಚರ್ಚಿಸಿ ನಿಲ್ಲಿಸಬಹುದಾದ ಪದ-ಪುಂಜಗಳಲ್ಲ.ಈ ಪದಗಳ ಅರ್ಥವ್ಯಾಪ್ತಿ ಕುರಿತ ಚರ್ಚೆ ಇಂದಿಗೂ ಚಾಲ್ತಿಯಲ್ಲಿದೆ. ಹಾಗೆಯೇ, ಬಂಡಾಯ-ದಲಿತಗಳೆರಡನ್ನೂ ಒಂದೇ ಅರ್ಥದಲ್ಲಿ, ಒಂದೇ ವ್ಯಾಪ್ತಿಯಲ್ಲಿ ಇಟ್ಟು ನೋಡುವುದು ಸರಳವಾದ ಸಾಧ್ಯತೆಯಾಗಿಲ್ಲ. ಎರಡೂ ಪದಗಳ ಬಳಕೆಯಲ್ಲಿ ಸಾಕಷ್ಟು ಗೊಂದಲ ವ್ಯಾಖ್ಯಾನಗಳು ಚರ್ಚೆಯಲ್ಲಿವೆ.

ಬಂಡಾಯವೆನ್ನುವುದರ ಅರ್ಥವನ್ನು ಸರಳವಾಗಿ ಪ್ರತಿಭಟನೆ ಎನ್ನಬಹುದಾದರೂ ಬಂಡಾಯದ ಸಾಹಿತ್ಯದ ಸ್ವರೂಪ ಅಷ್ಟು ಸುಲಭವಾಗಿಲ್ಲವೆನ್ನುವುದು ಇಲ್ಲಿ ಗಮನಾರ್ಹ. ಬಂಡಾಯ ಎನ್ನುವುದು ಶೋಷಣೆಯ ವಿರುದ್ಧದ ಧ್ವನಿ. ಒಂದು ವ್ಯವಸ್ಥೆಯ ವಿರುದ್ಧ, ಅಸಮಾನತೆಯ ವಿರುದ್ಧ ಮೂಲಭೂತ ಸ್ಥಾನಮಾನಗಳಿಗಾಗಿ ಹೋರಾಡುವಾಗ ಒಬ್ಬ ವ್ಯಕ್ತಿಯು ಧ್ವನಿಯು ಮಹತ್ವವಾಗುವುದಿಲ್ಲ.ಅದು ಒಂದೇ ಮನೋಭಾವದ, ಗುಣಚರ್ಮದ ಸಮೂಹವನ್ನು ಬಯಸುತ್ತದೆ.ಅಂತಹ ಸಮೂಹದ ಧ್ವನಿಗೆ ನಿಜವಾದ ಅರ್ಥದಲ್ಲಿ ಬಂಡಾಯದ ಮಹತ್ವ ದೊರಕುತ್ತದೆ. ಹಾಗೆನ್ನುವುದರೊಂದಿಗೆ ಬಂಡಾಯವೆನ್ನುವುದು ಸ್ಪಷ್ಟವಾಗಿ ಒಂದು ಸಂಘಟನೆ ಎಂದು ತೆರೆದುಕೊಳ್ಳುತ್ತದೆ.

ಒಟ್ಟಾರೆಯಾಗಿ ವಸ್ತುಸ್ಥಿತಿಯನ್ನು ಪ್ರಶ್ನಿಸುವ ಮತ್ತು ಪರಿಸ್ಥಿತಿಯನ್ನು ಬದಲಾಯಿಸುವ ಉದ್ದೇಶದಿಂದ ಪ್ರತಿಭಟಿಸುವ ಒಂದು ಪ್ರವೃತ್ತಿ.ಅಷ್ಟೇ ಅಲ್ಲದೆ ಬಂಡಾಯವೆನ್ನುವುದು ಚಾರಿತ್ರಿಕ ಅನಿವಾರ್ಯವಾಗಿದೆ.ಇಂದು ನೊಂದವರ ಧ್ವನಿ.ಇದರ ವಿಸ್ತಾರದಲ್ಲಿ ಬಂಡಾಯ ಕೇವಲ ಸಾಹಿತ್ಯವಾಗುವುದಿಲ್ಲ.ಅದು ಸಂಘಟನೆಯ ವ್ಯಾಪಕತೆಯಿಂದ ನಿಜವಾದ ಅರ್ಥದಲ್ಲಿ ಚಳುವಳಿ ಯಾಗಬೇಕಾದ್ದು ಎನ್ನುವುದನ್ನು ಧ್ವನಿಸುತ್ತದೆ.

Copyright © 2025, Scholarly Research Journal for Interdisciplinary Studies

ಈ ಕಾರಣದಿಂದಲೂ ನಾವು ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ ಬಂಡಾಯ ಸಾಹಿತ್ಯ ಪರಂಪರೆಯನ್ನು ಚಳುವಳಿ ಎಂದು ಹೆಸರಿಸುವುದು ಅನ್ವರ್ಥವೂ, ಹೆಚ್ಚು ಅರ್ಥಪೂರ್ಣವೂ ಆಗಿದೆ ಎಂದು ಭಾವಿಸಬಹುದಾಗಿದೆ.ಇದು ಸಮಗ್ರವಾಗಿ ಅಸಮಾನತೆಯ ವಿರುದ್ಧ ಮಾತನಾಡಲು ಹೊರಟಿದ್ದರಿಂದ ಇದರ ವ್ಯಾಪ್ತಿಯನ್ನು ಇಂತಿಷ್ಟೇ ಎಂದು ನಿರ್ಧರಿಸುವುದು ಸಾಧ್ಯವಾಗಿಲ್ಲ.

ಭಾರತದ ಸಂದರ್ಭದಲ್ಲಿ ದಲಿತ ಎನ್ನುವುದಕ್ಕೆ ಜಾತಿಯನ್ನೇ ಮಾನದಂಡವನ್ನಾಗಿಟ್ಟುಕೊಂಡು ಅರ್ಥೈಸಲಾಗಿದೆ.ದಲಿತ ಎನ್ನುವ ಪದಕ್ಕೆ ನಿಘಂಟು ಆಧಾರಿತವಾಗಿ ಸಾಮಾನ್ಯ ಅರ್ಥದಲ್ಲಿ ಹಿಂದುಳಿದವನು, ದಮನಕ್ಕೆ ಒಳಗಾದವನು, ಆರ್ಥಿಕವಾಗಿ, ಸಾಮಾಜಿಕವಾಗಿ ಕೆಳಮಟ್ಟದಲ್ಲಿರುವವನನ್ನು ಎಂದೆಲ್ಲಾ ಅರ್ಥಗಳನ್ನು ನೀಡಲಾಗಿದೆ. ಭಾರತದ ಜಾತಿ ವ್ಯವಸ್ಥೆಯ ಸಂದರ್ಭದಲ್ಲಿ ಸಮಾಜದಲ್ಲಿ ಅಸ್ಪೃಶ್ಯರು ಎಂದು ಪರಿಗಣಿಸಲಾದ ಪಂಚಮರನ್ನು ದಲಿತರು ಎಂದು ಗುರುತಿಸಲಾಗಿದೆ.ಸಾಂಪ್ರದಾಯಿಕವಾದ, ಅವೈಜ್ಞಾನಿಕವಾದ ಶೋಷಣೆಯ ಅರ್ಥದ ಭಾರತೀಯ ವ್ಯವಸ್ಥೆಯಲ್ಲಿ ಅತ್ಯಂತ ಕೆಳಗಿನ ಸ್ಥಾನದಲ್ಲಿ ದಲಿತ ಎನ್ನುವುದನ್ನು ಪರ್ಯಾಯವಾಗಿ ಬಳಸಲಾಗಿದೆ.

ಶೋಷಣೆ ಎನ್ನುವುದು ಚಾರಿತ್ರಿಕ ಅರ್ಥ ಮತ್ತು ಅಂಶವಾಗುವುದರಿಂದ, ಇದನ್ನು ಜಾತಿಯ ನೆಲೆಯಲ್ಲಿ ಅಳೆಯಲು ಬರುವುದಿಲ್ಲ.ಆದ್ದರಿಂದ ವ್ಯವಸ್ಥೆಯಲ್ಲಿ ಸಾಮಾಜಿಕ, ರಾಜಕೀಯ ರಂಗದ ಒಟ್ಟು ಸಂದರ್ಭದಲ್ಲಿ ದಮನಕ್ಕೆ ಒಳಗಾದವರೆಲ್ಲರೂ ದಲಿತರು.ಗಟ್ಟಿಯಾದ ಧ್ವನಿ ಒದಗಬಹುದಾದದ್ದು ಅಸ್ಪೃಶ್ಯರ ನೆಲೆಯಿಂದ ಮಾತ್ರ ಎನ್ನುವುದು ಸಮರ್ಥವಾದುದಾಗಿದೆ.ಇಂತಹ ದಟ್ಟವಾದ ಹಿನ್ನೆಲೆಯಿಂದಲೇ ದಲಿತವು ಆಧುನಿಕ ಭಾರತದ ಸಂದರ್ಭದಲ್ಲಿ ಗಟ್ಟಿ ಧ್ವನಿಯಾಗಬೇಕಾದ ತುರ್ತನ್ನೂ, ಚಳುವಳಿಯಾಗಬೇಕಾದ ಅನಿವಾರ್ಯತೆಯನ್ನೂ ಎದುರಿಸಿರಿ ಎನ್ನಬಹುದು.

ಮೊದಮೊದಲಿಗೆ ಬಂಡಾಯ-ದಲಿತಗಳನ್ನು ಧೋರಣೆಯ ನೆಲೆಯಿಂದ ಒಂದೇ ಚಿಂತನೆಯ ನೆರಳಲ್ಲಿ ಗಮನಸಿದರು.ಈ ಹೊತ್ತಿನ ಸಮಕಾಲೀತನೆಯಲ್ಲಿ ಅದು ಅಷ್ಟು ಸುಲಭವಾದುದಲ್ಲ ಎನ್ನುವುದನ್ನು ಇಲ್ಲಿಯೇ ನಾವು ನೆನೆಯಬಹುದು. ಬಂಡಾಯ-ದಲಿತಗಳು ಶೋಷಣೆಯ ವಿರುದ್ಧದ ದನಿಗಳು ಎನ್ನುವ ಸಾಮಾನ್ಯ ಅರ್ಥವ್ಯಾಪ್ತಿಯ ಹಿನ್ನೆಲೆಯಲ್ಲಿ ಈ ತೆರನಾದ ಚಳುವಳಿಗಳು ರೂಪುಗೊಂಡವು.

*Copyright © 2025, Scholarly Research Journal for Interdisciplinary Studies*

ಮಾರ್ಕ್ಸ್‌ವಾದದ ಪ್ರಭಾವವನ್ನು ನಾವು ಗಮನಿಸಬಹುದಾದರೆ ಈ ಹಿಂದಿನ ಸಾಹಿತ್ಯ ಚಳುವಳಿಗಳಲ್ಲೆಲ್ಲಾ ಭಾಷಾತೀತ ಪ್ರಭಾವವು ದಟ್ಟವಾಗಿರುವುದನ್ನು ನೋಡಬಹುದು.ಪ್ರಗತಿಶೀಲ ಚಳುವಳಿಯ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ ಮಾರ್ಕ್ಸ್‌ವಾದವೇ ದಲಿತ ಬಂಡಾಯ ಸಾಹಿತ್ಯ ಚಳುವಳಿಯ ಮೇಲೆಯೂ ತನ್ನ ಪ್ರಭಾವವನ್ನು ಬೀರಿದೆ.ಅದರಲ್ಲಿಯೂ ಮುಖ್ಯವಾಗಿ ಬಂಡಾಯ ಲೇಖಕರ ಮೇಲೆ ಈ ತೆರನಾದ ಪ್ರಭಾವ ತುಸು ಹೆಚ್ಚು ಎಂದೇ ಹೇಳಬಹುದಾಗಿದೆ.ಸಮಾನತೆಯ, ಒಟ್ಟಾರೆಯಾದ ಹೋರಾಟದ ಕಾರಣದಿಂದಲೂ ಇದು ಹೆಚ್ಚು ನಿಕಟವಾದುದು ಎಂಬುದನ್ನು ಗಮನಿಸಬಹುದು.ಮಾರ್ಕ್ಸ್‌ನ ವರ್ಗ ಸಂಘರ್ಷದ ಮೂಲ ಚರ್ಚೆಗಳು ಇವರನ್ನು ಪ್ರಭಾವಗೊಳಿಸುತ್ತದೆ.ಇಲ್ಲಿ ಜಾತಿ ಮುಖ್ಯವಾಗುವುದಿಲ್ಲ.ಎಲ್ಲಾ ಜಾತಿಯ ಬಡವ-ಬಲ್ಲಿದರ ನಡುವಿನ ಸಂಘರ್ಷವೇ ಇವರಿಗೆ ಪ್ರಧಾನವಾಗಿರುತ್ತದೆ.ಇಲ್ಲಿ ಸಾಹಿತಿಯಾದವನಿಗೆ ಆರೋಗ್ಯಕರವಾದ ಸಮಾಜ ನಿರ್ಮಾಣವನ್ನು ಕುರಿತು ಇರಬೇಕಾದ ಗಂಭೀರ ಕಾಳಜಿಯನ್ನೇ ಬಂಡಾಯ ಲೇಖಕ ಪ್ರಧಾನವಾದ ಲಕ್ಷಣವಾಗಿ ಗಮನಿಸುತ್ತಾನೆ.

ಬಂಡಾಯದವರ ಮೇಲೆ ಉಂಟಾದ ಪ್ರಭಾವ ದಲಿತರ ಮೇಲೆ ಮಾರ್ಕ್ಸ್ ಸಿದ್ಧಾಂತದಿಂದ ಉಂಟಾಗದಿದ್ದರೂ ತೀರಾ ಇಲ್ಲವೇ ಇಲ್ಲ ಎನ್ನುವಂತದ್ದಿರಬಹುದು. ಈ ಸಿದ್ಧಾಂತದ ಪ್ರೇರಣೆಯೇ ಬಂಡಾಯ-ದಲಿತಕ್ಕೆ ರಾಜಕೀಯ ಪ್ರಜ್ಞೆ ಅಥವಾ ಆ ತೆರನಾದ ಸಂಬಂಧ ಅಗತ್ಯವಾದುದು ಎನ್ನುವುದನ್ನು ಗಟ್ಟಿಗೊಳಿಸಿತು ಎನ್ನಲಾಗಿದೆ.ಪಾಶ್ಚಾತ್ಯದ ಪ್ರಭಾವದ ಹಾಗೆ ಬಂಡಾಯ-ದಲಿತ ಚಳುವಳಿಯ ಹಿನ್ನೆಲೆಯಲ್ಲಿ ಪ್ರಭಾವ ಪ್ರೇರಣೆ ನೀಡಿದ ದೇಶೀಯ ಸಿದ್ಧಾಂತ ಲೋಹಿಯಾ ವಾದವಾಗಿದೆ.

ಸ್ವಾತಂತ್ರ್ಯಾನಂತರ ಬಹು ಸಮರ್ಥ ಸಿದ್ಧಾಂತವಾಗಿ ಭಾವಿಸಲಾಗಿರುವುದು ಎಂದರೆ ಲೋಹಿಯಾ ವಾದ.ಮಹಾತ್ಮ ಗಾಂಧಿಯವರ ಪ್ರಭಾವಕ್ಕೆ ಒಳಗಾದ ಲೋಹಿಯಾ ಅವರು ಈ ದೇಶದ ಬಹುಜನರ ಧ್ವನಿಯ ಅರ್ಥದಲ್ಲಿ ಬ್ರಾಹ್ಮಣೇತರರ ಮಹತ್ವದ ಪ್ರೇರಣೆಯಾಗಿದ್ದಾರೆ.ಅಧಿಕಾರ ವಿಕೇಂದ್ರೀಕರಣವೇ ಲೋಹಿಯಾರ ಮಹತ್ವದ ಆಶಯವಾಗಿತ್ತು. ಬಂಡಾಯ ಲೇಖಕರ ಮೇಲೆ ನೇರವಾದ ಪ್ರಭಾವವನ್ನು ಬೀರಿದೆ. ಲೋಹಿಯಾ ಈ ದೇಶದ ಸಾಂಸ್ಕೃತಿಕ ನೆಲೆಯಿಂದ ದೇಶಭಾಷೆಗಳವರೆವಿಗೂ ವಿಸ್ತಾರವಾದ ವೈಚಾರಿಕ ವಾದವನ್ನು ಮೂಡಿಸಿದರು.ಅದರಲ್ಲಿ ಜಾತಿ ವ್ಯವಸ್ಥೆಯನ್ನು ಕುರಿತ ಗಂಭೀರ ಚಿಂತನೆಗಳೂ ದಾಖಲಾಗಿದ್ದವು.ಸಹಜವಾಗಿಯೇ ಇದು ಬಂಡಾಯಗಾರರ, ದಲಿತರ ಮೇಲೆ

Copyright © 2025, Scholarly Research Journal for Interdisciplinary Studies

ಪ್ರಭಾವ ಬೀರಿದರೂ ಅವರ ನಡುವೆ ಸಿದ್ಧಾಂತದ ಅಂತರವನ್ನು ಸೃಷ್ಟಿಸಿದ್ದೂ ಸಹ ಅಷ್ಟೇ ನಿಜವಾಗಿತ್ತು.ಇಲ್ಲೆಲ್ಲಾ ನಾವು ಗಮನಿಸಬೇಕಾದ ಮಹತ್ವದ ಸಂಗತಿಯೆಂದರೆ ಭಿನ್ನ ಧ್ವನಿ, ಮತಗಳ ನಡುವೆಯೂ ಸಂಘಟನೆಯ ನೆಲೆಯಲ್ಲಿ ಹೋರಾಡಲು ಸಿದ್ಧತೆಯಾದದ್ದು.ಮಾರ್ಕ್ಸ್ ಮತ್ತು ಲೋಹಿಯಾ ಬಂಡಾಯದ ಮೇಲೆ ಬೀರಿದ ಪ್ರಭಾವ ಗಮನಿಸಿದಂತೆ ಅದಕ್ಕಿಂತ ಹೆಚ್ಚಿನ ಪ್ರಭಾವವನ್ನು ದಲಿತರ ಮೇಲೆ ಬೀರಿದ ದೇಶೀಯ ಸಿದ್ಧಾಂತವೆಂದರೆ ಅಂಬೇಡ್ಕರ್ ವಾದ.

ಅಂಬೇಡ್ಕರ್ ಕರ್ನಾಟಕದ ಸಂದರ್ಭದಲ್ಲಿ ಅಷ್ಟೇ ಅಲ್ಲ, ಇಡೀ ಭಾರತದ ದಲಿತೇತರರೆಲ್ಲರ ಮೇಲೆ ಬೀರಿದ ಪ್ರಭಾವ ಸಾಮಾನ್ಯವಾದುದಾಗಿರಲಿಲ್ಲ.ದಲಿತರು ಒಂದಲ್ಲಾ ಒಂದು ನೆಲೆಯಲ್ಲಿ ಮಹತ್ವದ ಅರ್ಥದಲ್ಲಿ ಅಂಬೇಡ್ಕರ್ ಪ್ರಭಾವವನ್ನು ಒಳಗೊಂಡವರೇ ಆಗಿದ್ದಾರೆ. ಅದು ಸಹಜವೂ ಹೌದು.ಶತಮಾನಗಳಿಂದ ಶೋಷಣೆಯನ್ನಷ್ಟೇ ಅರಿತ ಜನರ ಸ್ವಾಭಿಮಾನದ ಶಕ್ತಿಯ ಸಾಧ್ಯತೆಯ ಪ್ರತೀಕವಾಗಿ ಹೊರಹೊಮ್ಮಿದ ಅಂಬೇಡ್ಕರ್ ಅವರನ್ನು ಈ ವರ್ಗಗಳ ಚಳುವಳಿಗಳು ಮಾದರಿಯಾಗಿರಿಸಿ ಕೊಂಡದ್ದರಲ್ಲಿ ಯಾವುದೇ ಉತ್ಪ್ರೇಕ್ಷೆಯನ್ನು ಗುರುತಿಸಬೇಕಿಲ್ಲ.ಅಂಬೇಡ್ಕರ್‌ರವರ ಚಿಂತನೆಯೂ ಅಷ್ಟೇ ಪ್ರಖರವಾದುದಾಗಿತ್ತು, ಪ್ರಶಾಂತವಾದುದಾಗಿತ್ತು.ಸಹಜವಾಗಿ ಅನುಭವಿಸಿ ಅದರಿಂದ ಕಂಡುಕೊಂಡ ಸತ್ಯದ ಸಾಕಾರವೂ ಆಗಿತ್ತು.ಹಿಂದೂ ಧರ್ಮದ ಶೋಷಣೆಯ ದೃಷ್ಟಿಯಿಂದಲೇ ಅವರು ಈ ದೇಶದ ಜಾತೀಯತೆಯ ವಿಪರೀತತೆಯನ್ನು ಅರ್ಥೈಸಲು ಪ್ರಯತ್ನಪಟ್ಟಿದ್ದರು.ಇಡಿಯಾಗಿ ಈ ದೇಶದ ಒಟ್ಟು ವ್ಯವಸ್ಥೆಯಲ್ಲಿ ಸಾಮಾಜಿಕ ಸ್ಥಾನಮಾನದಿಂದ ಹಿಡಿದು ರಾಜಕೀಯ ಅಸಮಾನತೆಯವರೆಗೆ ಶೂದ್ರರನ್ನು ವ್ಯವಸ್ಥಿತವಾಗಿ ಶೋಷಿಸಿದ ಕ್ರಮವನ್ನು ಅಂಬೇಡ್ಕರ್ ಸ್ಪಷ್ಟವಾಗಿ ಬಿಡಿಸಿಟ್ಟಿದ್ದರು.ಇದು ದಲಿತರಿಗಷ್ಟೇ ಅಲ್ಲದೆ ಬಂಡಾಯದವರಿಗೂ ಸಹ ದಿಕ್ಸೂಚಿಯಾಗಿತ್ತು.

ಮಾರ್ಕ್ಸ್, ಲೋಹಿಯಾ, ಅಂಬೇಡ್ಕರ್ ವಾದಗಳಷ್ಟೇ ಅಲ್ಲದೆ ಪ್ರಾಚೀನ ಕನ್ನಡ ಸಾಹಿತ್ಯದ ಇತಿಹಾಸದಿಂದ ಸಂದರ್ಭದಿಂದಲೂ ಮಾದರಿಗಳನ್ನು ಸ್ಫೂರ್ತಿಯನ್ನು ಪಡೆಯುವ ಪ್ರಯತ್ನವು ಇಲ್ಲಿ ನಡೆಯಿತು. ಆದ್ದರಿಂದ ಬಸವಾದಿ ಶರಣರೂ ಸಹ ಬಂಡಾಯ-ದಲಿತ ಚಳುವಳಿಗೆ ಪ್ರೇರಕರೇ ಆಗಿದ್ದಾರೆ.ಅವರೊಂದಿಗೆ ಬುದ್ಧನಂತಹ ಮಾನವತಾವಾದಿಗಳಿಂದಲೂ ಪ್ರೇರಣೆ ಪಡೆಯಲು ಇವರ ಪ್ರಯತ್ನ ಸಾಗಿದೆ.

Copyright © 2025, Scholarly Research Journal for Interdisciplinary Studies

ಬಂಡಾಯ–ದಲಿತ ಚಳುವಳಿಗಳಿಗೆ ಸೈದ್ಧಾಂತಿಕವಾದ ಮಾನವೀಯ ಚೌಕಟ್ಟು ದೊರೆತಿದ್ದು ಇದೇ ಬಗೆಯ ಹತ್ತು ಹಲವಾರು ಕಾರಣಗಳಿಗಾಗಿ ಎನ್ನುವುದು ಗಮನಾರ್ಹವಾದುದು.

ಹೀಗೆ ವ್ಯಕ್ತಿ ಆಧಾರಿತ ಸಿದ್ಧಾಂತಗಳಲ್ಲದೆ ಚಳುವಳಿಗಳಿಗೂ ಈ ಸಾಹಿತ್ಯ ಪರಂಪರೆಯ ಮೇಲೆ ಪ್ರಭಾವ ಬೀರಿದ್ದನ್ನು ನಾವು ಇಲ್ಲಿ ಗಮನಿಸಬಹುದು.ಸಮಾನತೆಯ ಅರ್ಥ ಮತ್ತು ಕಾರಣದ ಕೆಲವು ಚಳುವಳಿಗಳು ಅರವತ್ತರ ದಶಕದ ಕೊನೆಯಲ್ಲಿ ಕಾಕತಾಳೀಯವೇ ಎಂಬಂತೆ ದೇಶದ ವಿಭಿನ್ನ ನೆಲೆಗಳಲ್ಲಿ ಕಾಣಿಸಿಕೊಂಡಿದ್ದವು.ಅವುಗಳಲ್ಲಿ ದಲಿತೋದ್ಧಾರ ಚಳುವಳಿಗಳು ಹಾವನೂರು ವರದಿ, ಬೂಸಾ ಪ್ರಕರಣ, ಜಾತಿ ವಿನಾಶ ಸಮ್ಮೇಳನ, ಬರಹಗಾರರ ಮತ್ತು ಕಲಾವಿದರ ಒಕ್ಕೂಟದಂತಹ ಸಂಘಟನೆಗಳು ಈ ಚಳುವಳಿಯ ಹಿನ್ನೆಲೆಗೆ ಪ್ರೇರಕವಾಗಿದ್ದವು.ಇಲ್ಲಿಯೇ ಗಮನಿಸಬೇಕಾದಂತಹ ಮತ್ತೊಂದು ಪ್ರಭಾವವೆಂದರೆ ಪತಿಕೆಗಳಾಗಿದ್ದವು.ಕರ್ನಾಟಕದ ಕೆಲವು ಪತ್ರಿಕೆಗಳು ತಮ್ಮ ಎಂದಿನ ಅವೈಜ್ಞಾನಿಕ ಪ್ರೇರಣೆಗಳ ಆಚೆಗೆ ಮಾನವೀಯ ನಿಟ್ಟಿನಲ್ಲಿ ಆರೋಗ್ಯಕರವಾಗಿ ಯೋಚಿಸುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟವು. ಬಂಡಾಯ–ದಲಿತರ ಬಗೆಗಿನ ಕಾಳಜಿಯನ್ನು ಮೃದು ನಿಲುವನ್ನು ವ್ಯಕ್ತಪಡಿಸಿದವು. ಅದರೊಂದಿಗೆ ಈ ಉದ್ದೇಶವನ್ನೇ ಪ್ರಧಾನವಾಗಿರಿಸಿಕೊಂಡ ಕೆಲವು ಪತ್ರಿಕೆಗಳು ಪ್ರಕಟವಾಗತೊಡಗಿದವು.ಅವುಗಳೆಂದರೆ ಸಂಕ್ರಮಣ, ಅನ್ವೇಷಣೆ, ಮುಂಗಾರು, ಬಂಡಾಯ ಸಾಹಿತ್ಯ, ಪಂಚಮ, ಹೊಸದಿಕ್ಕು, ಸಮುದಾಯ ವಾರ್ತಾಪತ್ರ, ಕೆಂಬಾವುಟ ಇತ್ಯಾದಿಗಳನ್ನು ಇಲ್ಲಿ ನೆನೆಯಲೇಬೇಕು.

ನವ್ಯಕಾವ್ಯದ ತೀವ್ರತೆಯ ಪ್ರಮಾಣ ಕಡಿಮೆಯಾದುದು ಇಲ್ಲಿ ಮುಖ್ಯವಾಗಿ ನೆನೆಯಬೇಕಾದದ್ದು. ಆ ಸಾಹಿತ್ಯ ಚಳುವಳಿಯ ಮಿತಿಗಳು ಬಂಡಾಯ–ದಲಿತದ ಹುಟ್ಟಿಗೆ ಕಾರಣವಾದವು. ತನ್ನನ್ನೇ ಕೇಂದ್ರೀಕರಿಸಿಕೊಂಡ ಆತ್ಮಶೋಧದ ನೆಲೆಯ ಕಾವ್ಯವೇ ಸಮಾಜದ ಪರವಾದ, ಸಮುದಾಯದ ಹಿತವನ್ನು ಕೋರುವ ಸಾಹಿತ್ಯ ಸೃಷ್ಟಿಯ ಅನಿವಾರ್ಯತೆಯನ್ನು ಸೃಷ್ಟಿಸಿತ್ತು.ಸಾಲದಕ್ಕೆ ತೇಜಸ್ವಿಯವರು ಹೇಳುವಂತೆ ಇದು ಬಹುಪಾಲು ಎರವಲು ತಂದದ್ದು ಆಗಿತ್ತು.ಈ ದೇಶದ, ನಾಡಿನ, ಸಮಾಜದ ನೆಲದ್ದಾಗಿ ದೇಶೀಯತೆಯ ಅರ್ಥದ ಹುಡುಕಾಟ ಅಗತ್ಯವಾಗಿತ್ತು.ಇಂತಹ ಬಹುಪಾಲು ಅನಿವಾರ್ಯತೆಗಳನ್ನು ಸಾಹಿತ್ಯವು ಸೃಷ್ಟಿಸಿತೆನ್ನುವುದು ಗಮನಾರ್ಹ.ಅರವತ್ತರ ದಶಕದ

*Copyright © 2025, Scholarly Research Journal for Interdisciplinary Studies*

ಮಧ್ಯಭಾಗದಲ್ಲಿ ನೆರೆಯ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಇದೇ ತೆರನಾದ ಸಂಚಲನವೊಂದು ಉಂಟಾಗಿತ್ತು.ದಿಗಂಬರ ಕಾವ್ಯದ ಹೆಸರಿನಲ್ಲಿ ಒಂದು ಸಮಾಜದ ಪರವಾದ, ಶೋಷಿತರ ಪರವಾದ ಧ್ವನಿಯೊಂದು ಕ್ರಾಂತಿಯ ಸ್ವರೂಪದಲ್ಲಿ ತಲೆ ಎತ್ತಿತ್ತು.ವಿಶಿಷ್ಟವಾದ ಬಗೆಯಲ್ಲಿ ಬಂಡಾಯವನ್ನು ಮೊದಲಿಗೆ ಸಂಘಟಿಸಿದ ಕೀರ್ತಿ ಆಂಧ್ರದ ದಿಗಂಬರ ಸಾಹಿತ್ಯಕ್ಕೆ ಸಲ್ಲುವುದು.ಇದು ಕರ್ನಾಟಕದ ಬಂಡಾಯ-ದಲಿತ ಸಾಹಿತ್ಯ ಚಳುವಳಿಗಳಿಗೂ ಪ್ರೇರಣೆಯನ್ನು ಒದಗಿಸಿತ್ತು.

ಬಂಡಾಯ-ದಲಿತ ಸಾಹಿತ್ಯದ ಗುರಿಗಳ ಹಿನ್ನೆಲೆಯಲ್ಲಿ ನೋಡುವುದಾದರೆ ಇವು ಪ್ರಣಾಳಿಕೆಯೊಂದನ್ನು ಸಿದ್ಧಪಡಿಸಿಕೊಂಡವು.ಅದನ್ನು ಬಂಡಾಯ ಸಾಹಿತ್ಯ ಸಂಘಟನೆಯ ಪ್ರಣಾಳಿಕೆ ಮತ್ತು ಸಂವಿಧಾನವೆಂದು ಕರೆಯಲಾಯಿತು.ನೂರಾರು ವ್ಯಕ್ತಿಗಳು ಒಂದು ಉದ್ದೇಶದಿಂದ ಹೋರಾಟದಲ್ಲಿ ತೊಡಗಿಸಿಕೊಳ್ಳುವ ಹೊತ್ತಿಗೆ ಈ ಸ್ವರೂಪ ಪ್ರಣಾಳಿಕೆ ಅಗತ್ಯವಾಗುತ್ತದೆ.ಅದು ಅವರ ನಡುವಿನ ಹೊಂದಾಣಿಕೆ ಮತ್ತು ಬದ್ಧತೆಯ ಕಾರಣದಿಂದಲೂ ಅಗತ್ಯವಾಗಿರುತ್ತದೆ. ಹಾಗಾದಾಗಲೇ ಒಂದು ಸಾಮಾನ್ಯ ನೀತಿ, ಆಲೋಚನೆ, ಚಿಂತನೆಗಳೊಂದಿಗೆ ಸಕಿಯವಾಗಿ ತೊಡಗಿಸಿಕೊಳ್ಳುವುದು, ಕ್ರಿಯಾಶೀಲವಾಗುವುದು ಸಾಧ್ಯವಾಗುತ್ತದೆ.

ನಮ್ಮ ಸಾಂಸ್ಕೃತಿಕ ಕ್ಷೇತ್ರಗಳ ಅನೇಕ ವರ್ಷಗಳಿಂದ ಕಂಡುಬರುತ್ತಿರುವ ಪ್ರಗತಿಪರ ಧೋರಣೆಗಳು ತೆಗೆದುಕೊಂಡ ತಿರುವುಗಳು, ಎದುರಿಸಿದ ಸಮಸ್ಯೆಗಳು ಮತ್ತು ತಲುಪಿದ ಕ್ಷೀಣ ನೆಲೆಗಳನ್ನು ಗಮನಿಸಿದಾಗ ಅವುಗಳಿಂದ ಪಾಠ ಕಲಿತ ವ್ಯಾಪಕ ಸ್ವರೂಪದ ಸಂಘಟನೆಯ ಅಗತ್ಯ ಗೊತ್ತಾಗುತ್ತದೆ.ಒಕ್ಕೂಟ, ಪ್ರಗತಿ ಪಂಥಗಳ ಸಾಫಲ್ಯ-ವೈಫಲ್ಯಗಳ ದಾಖಲೆಗಳ ನಮಗೊಂದು ಎಚ್ಚರಿಕೆಯ ಸಂಗತಿಯೂ ಆಗಿದೆ.ನಮ್ಮ ದೇಶದ ಚಾರಿತ್ರಿಕ, ರಾಜಕೀಯ ಬೆಳವಣಿಗೆಗಳ ಸ್ವರೂಪದಿಂದಾಗಿ ಉದ್ಭವಿಸಿದ ಇಂದಿನ ವಿಶಿಷ್ಟ ಸಂದರ್ಭದ ಹಿನ್ನೆಲೆಯಲ್ಲಿ ದಲಿತ ಬಂಡಾಯ ಚಳುವಳಿಯು ಹೋರಾಟದ ನೆಲೆಯನ್ನು ಕಂಡುಕೊಳ್ಳಬೇಕಾಗಿತ್ತು.ಜನವಿರೋಧಿ ನಿಲುವುಗಳು ವಿವಿಧ ಮುಖವಾಡಗಳ ಮರೆಯಲ್ಲಿ ಒಂದಾಗಿ ವಿಜೃಂಭಿಸುತ್ತಿರುವ ಈ ಸಂದರ್ಭ ಪ್ರಗತಿಪರ ಧೋರಣೆಯ ಎಲ್ಲರಿಗೂ ಒಂದು ಸವಾಲು. ಸಮಕಾಲೀನ ಚರಿತ್ರೆಯ ಬೆಳವಣಿಗೆಯ ಸ್ವರೂಪದಿಂದಾಗಿ ಎಲ್ಲಾ ವಾಮಪಂಕ್ತಿಯರ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅತ್ಯಂತ ವ್ಯಾಪಕವಾಗಿ ಹಬ್ಬುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.ಶೋಷಿತ ಜನತೆಯ ಪರವಾದ ನಿಲುವುಗಳನ್ನು

Copyright © 2025, Scholarly Research Journal for Interdisciplinary Studies

ಸಾಂಸ್ಕೃತಿಕ ಕ್ಷೇತ್ರದಲ್ಲಿ ಬದ್ಧವಾಗಿ ನೆಲೆಗೊಳಿಸುವುದು ದಲಿತ-ಬಂಡಾಯಗಾರರ ಮುಖ್ಯ ಗುರಿಗಳಲ್ಲಿ ಒಂದಾಗಬೇಕು.ದಲಿತ-ಬಂಡಾಯದ ಹೋರಾಟ ಪ್ರಧಾನವಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದು, ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಸಂದರ್ಭಗಳು ಪರಸ್ಪರ ಸಂಬಂಧವುಳ್ಳವು ಎಂಬ ನಿಲುವುನಿಂದ ಹೊರಟಿದ್ದು. ಸಾಹಿತಿಗೆ ಸಾಮಾಜಿಕ, ರಾಜಕೀಯ ಪ್ರಜ್ಞೆ ಇರಬೇಕೆಂಬ ಆಶಯ ಇಲ್ಲಿ ಮುಖ್ಯವಾದದ್ದು.ಅಸ್ಪೃಶ್ಯತೆ, ಜಾತಿಪದ್ಧತಿ ಮತ್ತು ಲಿಂಗಬೇಧ ನೀತಿಯ ವಿರುದ್ಧ ಹೋರಾಟವನ್ನು ಕಟ್ಟುವುದು ದಲಿತ-ಬಂಡಾಯ ಮುಖ್ಯ ಉದ್ದೇಶಗಳಲ್ಲಿ ಒಂದು.ಎಲ್ಲಾ ಜನಪರ ನಿಲುವುಗಳಿಗೆ ಇವುಗಳ ಬೆಂಬಲ, ಜನಪರವಾದ ಸಾಂಸ್ಕೃತಿಕ ಹೋರಾಟ ಮುಖ್ಯನೆಲೆ.ಇಂತಹ ಒಲವಿನ ಸಾಹಿತ್ಯ ಸೃಷ್ಟಿ ಹೋರಾಟದ ಮುಖ್ಯ ದಾಖಲೆ.ಈ ರೀತಿಯ ಪ್ರಣಾಳಿಕೆ ಇಡಿಯಾಗಿ ದಲಿತ-ಬಂಡಾಯ ಸಾಹಿತ್ಯದ ರೂಪು ರೇಷೆ ವೇಷಗಳನ್ನು ಸ್ಪಷ್ಟವಾಗಿ ಖಚಿತಗೊಳಿಸುತ್ತವೆ.ತನ್ಮೂಲಕ ದಲಿತ-ಬಂಡಾಯ ಸಾಹಿತ್ಯಕ್ಕೆ, ಸಂಘಟನೆಗೆ ಇರಬಹುದಾದ ಸವಾಲನ್ನು, ಜವಾಬ್ದಾರಿಯನ್ನು ಮತ್ತು ಅದನ್ನು ನಿಭಾಯಿಸಬಹುದಾದ ಬದ್ಧತೆಯನ್ನು ನಿರೂಪಿಸುತ್ತದೆ. ಇಲ್ಲಿ ಬದ್ಧತೆ ಪ್ರಧಾನವಾಗುವುದರಿಂದ ಶೋಷಣೆಯನ್ನು ವಿರೋಧಿಸುವ ಪ್ರಗತಿಪರ ಆಲೋಚನೆಯ ಚಿಂತಕರೆಲ್ಲರೂ ಮುಖ್ಯರಾಗುತ್ತಾರೆ.ಕನಸುಗಳು ಕೇವಲ ಆದರ್ಶದ ಅಮೂರ್ತದ ನೆಲೆಗಟ್ಟಿಗೆ, ಚೌಕಟ್ಟಿಗೆ ಸೀಮಿತವಾಗಿರದೆ ಸಮಾಜ ಇರಬಹುದಾದ, ಇರಬೇಕಾದ ನೆಲೆಯಲ್ಲಿಯೇ ವರ್ತಮಾನದ ಪ್ರಧಾನ ನೆಲೆಯಲ್ಲಿ ಸಾಹಿತ್ಯ ರೂಪುಗೊಳ್ಳಬೇಕಾದ ತುರ್ತನ್ನು ಇದು ಪ್ರತಿಪಾದಿಸುತ್ತದೆ.ಅದರ ಅರ್ಥ ನೆನ್ನೆಗಳನ್ನು ನಿರಾಕರಿಸುವುದಲ್ಲ, ನೆನ್ನೆಗಳಲ್ಲಿ ಆರೋಗ್ಯಕರ ಅಂಶಗಳಿದ್ದಲ್ಲಿ ಅದನ್ನೆಲ್ಲಾ ಗೌರವಿಸುತ್ತಾ ಮಾದರಿಗಳನ್ನಾಗಿಸಿಕೊಳ್ಳುತ್ತಾ ಅವುಗಳ ಮೇಲೆಯೇ ಹೊಸತನ್ನು ಸಾಧಿಸಬಹುದಾದ ಸಾಧ್ಯತೆಯನ್ನು ಕುರಿತು ಆಲೋಚಿಸಬಹುದಾದ ಅವಕಾಶವನ್ನು ಈ ದಲಿತ-ಬಂಡಾಯ ಚಳುವಳಿ ಮುಕ್ತವಾಗಿರಿಸಿತು.

ಒಟ್ಟಾರೆಯಾಗಿ ಬಂಡಾಯ-ದಲಿತಗಳು ಹೆಚ್ಚುಕಡಿಮೆ ಒಂದೇ ತೆರನಾಗಿ ಸಂಘಟನೆಯ ಅರ್ಥದೊಂದಿಗೆ ಬೆಳೆದವು. ಹತ್ತಾರು ಸಿದ್ಧಾಂತಗಳಿಂದ ವರ್ತಮಾನದಿಂದ ಪ್ರೇರಣೆ ಪಡೆದುಕೊಂಡು ಆ ನಿಟ್ಟಿನಲ್ಲಿಯೇ ಆಪ್ತವಾಗುವ ಸಾಹಿತ್ಯವನ್ನು ಇವು ನಿರ್ಮಾಣ ಮಾಡಿದವು. ಬೆಳವಣಿಗೆಯ ಜೊತೆಜೊತೆಗೆ ತಮ್ಮ ಉದ್ದೇಶಗಳನ್ನು

*Copyright © 2025, Scholarly Research Journal for Interdisciplinary Studies*

ನಿಲುವುಗಳನ್ನು ವೈಚಾರಿಕ ಬದ್ಧತೆಗಳನ್ನು ಪ್ರಕಟಪಡಿಸಿದವು. ಸಾಂಪ್ರದಾಯಿಕ ಬದುಕನ್ನು, ಸಮಾಜವನ್ನು ನಿರಾಕರಿಸುತ್ತಲೇ ಹೊಸ ಸಮಾಜದ ಕನಸನ್ನು ಇವು ಜೀವಂತ ವಾಗಿರಿಸಿಕೊಂಡು ಬಂದಿವೆ.ಅದರೊಂದಿಗೆ ಅಕ್ಷರಸ್ತರು, ಅನಕ್ಷರಸ್ತರು ಇಬ್ಬರನ್ನೂ ತಲುಪುವ ಕಾಳಜಿಯನ್ನು ಈ ಚಳುವಳಿ ಹೊಂದಿದೆ.ಆದುದರಿಂದಲೇ ಹಂತ-ಹಂತಗಳಲ್ಲೂ ಕೃಷಿ ಮಾಡುವ ಆಸೆ-ಆಸಕ್ತಿಗಳನ್ನು ಜೀವಂತವಾಗಿರಿಸಿಕೊಂಡಿದೆ ಎಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು**:-


1. *ನವ್ಯತೆ* –*ಡಾ.ಪುರುಷೋತ್ತಮ ಬಿಳಿಮಲೆ,*
2. *ಹೊಸಗನ್ನಡ ಸಾಹಿತ್ಯ* –*ಪ್ರೊ.ಎಲ್.ಎಸ್.ಶೇಷಗಿರಿರಾವ್*
3. *ಶಿಷ್ಟ ಪರಿಶಿಷ್ಟ* –*ಡಾ.ಪುರುಷೋತ್ತಮ ಬಿಳಿಮಲೆ*
4. *ಕನ್ನಡದಲ್ಲಿ ಬಂಡಾಯ ಸಾಹಿತ್ಯ* –*ಬಸವರಾಜ ಸಬರದ*
5. *ದಲಿತ ಬಂಡಾಯ ಮನೋಧರ್ಮ* –*ಮ.ನ.ಜವರಯ್ಯ*
6. *ಸಾಹಿತ್ಯ ಮತ್ತು ರಾಜಕಾರಣ* –*ಡಾ.ಬರಗೂರು ರಾಮಚಂದ್ರಪ್ಪ*
7. *ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ* –*ಅರವಿಂದ ಮಾಳಗತ್ತಿ*
8. *ಪಾಶ್ಚಾತ್ಯ ಸಾಹಿತ್ಯ ವಾದಗಳು ಮತ್ತು ಕನ್ನಡ ಸಾಹಿತ್ಯ ಸಂದರ್ಭ* –*ಡಾ.ಸಿ.ಆರ್.ಯರವಿನ ತೆಲಿಮಠ*
9. *ನವ್ಯಸಾಹಿತ್ಯ ದರ್ಶನ* –*ಶಾಂತಿನಾಥ ದೇಸಾಯಿ*
10. *ನವ್ಯತೆ* –*ಡಾ.ನರಹಳ್ಳಿ ಬಾಲಸುಬ್ರಮಣ್ಯ*


*Copyright © 2025, Scholarly Research Journal for Interdisciplinary Studies*